

ಹೈಡ್ರೋಫೋನಿಕ್ ಮಾದರಿ ಬಗ್ಗೆ ಮಾರ್ಗದರ್ಶನ ಮಾಡುತ್ತಿರುವ ಪ್ರಕಾಶ್

ಇವರ ಡೈರಿಯ ಹೆಸರು ಶಾಂಭವಿ. ಇರುವ ಹದಿನೈದು ಎಕರೆ ಜಮೀನಿನಲ್ಲಿ ಜಾನುವಾರುಗಳಿಗೆ ಅವಶ್ಯಕವಿರುವ ಮೇವನ್ನು ಬೆಳೆಯುತ್ತಾರೆ. ಹುಲ್ಲಿನ ಗಡ್ಡಿಗಳನ್ನು ಬೆಳೆಯುವುದರ ಜೊತೆಗೆ ರಾಸುಗಳಿಗೆ ವಿವಿಧ ರೀತಿಯ ಫೀಡ್‌ಗಳನ್ನು ಮೇವಾಗಿ ನೀಡುತ್ತಾರೆ. ಕಡ್ಲೆ ಹೊಟ್ಟು, ಸೋಯಾಬಿನ್, ಶೇಂಗಾ ಬಳ್ಳಿ, ಶೇಂಗಾ ಹೊಟ್ಟು, ತೊಗರಿ, ಹತ್ತಿ ಕಾಳು, ಮೆಂತೆ ಕಾಳು ಇತ್ಯಾದಿಗಳನ್ನು ಆಹಾರವಾಗಿ ಹಸುಗಳಿಗೆ ನೀಡುತ್ತಾರೆ. ಹಸುಗಳು ಆಹಾರವನ್ನು ಸಮರ್ಪಕವಾಗಿ ತಿನ್ನಲು ಟೋನೋಪಾಸ್ಪೇಟ್, ಕೆಸ್ಟೋಲ್, ಬೆಲಾಮಿನಲ್ ಔಷಧಗಳನ್ನು ನೀಡುತ್ತಾರೆ. ಆಕ್ಸಿಟ್ರ್ಯಾಕ್ಸಿನ್, ಜೋಬಿಡ್ ಜ್ವರ ಬಂದರೆ ಚುಚ್ಚುಮದ್ದು ನೀಡಲು ನುರಿತ ವೈದ್ಯರ ಬಳಿ ತರಬೇತಿ ಪಡೆದುಕೊಂಡು ತಾನೇ ಪಶುವೈದ್ಯರಾಗಿ ಹಸುಗಳ ಆರೈಕೆಯನ್ನು ಮಾಡುತ್ತಾರೆ.

ಹಸುಗಳ ಆಹಾರದಲ್ಲಿ ನಿತ್ಯ ಪ್ರತಿ ಹಸು ಒಂದಕ್ಕೆ 50 ಗ್ರಾಂ ಮೆಂತೆಯನ್ನು ಬೇಯಿಸಿ ಅದನ್ನು ಆರು ಗಂಟೆಗಳ ನಂತರ ರುಬ್ಬಿ ಫೀಡ್ ಜೊತೆಗೆ ಬೆರೆಸಿ ನೀಡುವುದರಿಂದ ಹಸುಗಳಲ್ಲಿನ ಕೆಚ್ಚಲು ಬಾವು ರೋಗವು ಕಡಿಮೆಯಾಗಿದ್ದು ಹಾಲಿನ ಇಳುವರಿ ಅಧಿಕವಾಗಿದೆ.

ಇದೊಂದು ಹೊಸ ಪ್ರಯೋಗ. ಸ್ವ ಉದ್ಯೋಗದ ಮೂಲಕ ಏನನ್ನಾದರೂ ಸಾಧನೆಯನ್ನು ಮಾಡಬೇಕೆಂಬ ಅಭಿಲಾಶೆ ಹೊಂದಿರುವ ಪ್ರಕಾಶ್, ಕೇವಲ ಹತ್ತು ಹಸುಗಳಿಂದ ಪ್ರಾರಂಭಿಸಿದ ಹೈನುಗಾರಿಕೆ ಘಟಕ ಇಂದು 35 ಆಕಳು, 15 ಕರು, ನಾಲ್ಕು ಎಮ್ಮೆ ಮತ್ತು ಒಂದು ಗೀರ್ ತಳಿಯ ಎತ್ತನ್ನು ಹೊಂದಿದ್ದು ಇವುಗಳ ಮೂಲಕ ದಿನನಿತ್ಯ 300 ರಿಂದ 400 ಲೀಟರ್ ಹಾಲು ಉತ್ಪಾದನೆ ಮಾಡುತ್ತಾರೆ.

ಈ ಹಾಲಿನ ಪೈಕಿ ಸುಮಾರು 70 ಲೀಟರ್ ಹಾಲನ್ನು ತನ್ನದೇ ಸ್ವಂತ ನಿಸರ್ಗ ಬ್ರಾಂಡ್ ಮೂಲಕ ಮನೆ ಮನೆಗಳಿಗೆ ಮಾರಾಟ ಮಾಡುತ್ತಾರೆ. ಉಳಿದ ಹಾಲನ್ನು ಕೆ.ಎಂ.ಎಫ್ ಸಂಸ್ಥೆಯು ತನ್ನ ಸ್ವಂತ ವಾಹನ ಮೂಲಕ ಇವರ ಹೈನುಗಾರಿಕಾ ಘಟಕಕ್ಕೇ ಬಂದು ಡೈರಿಗೆ ಒಯ್ಯುತ್ತದೆ. 'ಈ ಮೂಲಕ ಹೈನುಗಾರಿಕೆಯಲ್ಲಿ ಹಸುಗಳ ನಿರ್ವಹಣೆಗೆಂದು ಪ್ರತಿ ತಿಂಗಳಿಗೆ ಸುಮಾರು 3 ಲಕ್ಷ ರೂಪಾಯಿ ಖರ್ಚನ್ನು ಮಾಡಿದರೆ ಸುಮಾರು ರೂ.50 ಸಾವಿರ ನಿವ್ವಳ ಲಾಭವನ್ನು ಗಳಿಸುತ್ತಿದ್ದೇನೆ' ಎಂದು ಹೆಮ್ಮೆಯಿಂದ ಹೇಳುತ್ತಾರೆ. ಹೈಡ್ರೋಫೋನಿಕ್ ಮಾದರಿ ಅಳವಡಿಕೆಯಿಂದಾಗಿ ಹಸುಗಳಿಗೆ ಅವಶ್ಯವಿರುವ ಮೇವಿನ ಒಟ್ಟು ಪ್ರಮಾಣದ ಪೈಕಿ ಸುಮಾರು ಶೇ 65ರಷ್ಟು ಮೇವಿನ ಅವಶ್ಯಕತೆಯನ್ನು ಪ್ರಕಾಶ್, ಸ್ವತಃ ಉತ್ಪಾದಿಸುತ್ತಿರುವುದು ವಿಶೇಷ.

## ಸಾಲದಿಂದ ಲಾಭಕ್ಕೆ..

ಈ ಮಾದರಿಗೆ ಅತ್ಯಂತ ಅವಶ್ಯಕವಾಗಿ ಬೇಕಿರುವುದು ನೀರಿನ ವ್ಯವಸ್ಥೆ, ಕಟ್ಟಿಗೆಯ ರ್‍ಯಾಕ್, ಪ್ಲಾಸ್ಟಿಕ್ ಟ್ರೇ, ಗೋವಿನ ಜೋಳದ ಬೀಜ, ವಿದ್ಯುತ್ ವ್ಯವಸ್ಥೆ, ನೀರಿನ ಟ್ಯಾಂಕ್ ಮತ್ತು ನೀರುಣಿಸಲು ಅವಶ್ಯವಿರುವ ಪೈಪುಗಳು. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ತಂದೆ ಬಸವಂತಪ್ಪನವರಿಂದ ಒಂದು ಲಕ್ಷ ರೂಪಾಯಿ ಹಾಗೂ ಬ್ಯಾಂಕ್‌ನಿಂದ ಒಂದೂವರೆ ಲಕ್ಷ ರೂಪಾಯಿ ಸಾಲ ಪಡೆದು ಪ್ರಾರಂಭಿಸಿದ ಹೈನುಗಾರಿಕೆ ಇಂದು ಅತ್ಯುನ್ನತ ಮಟ್ಟದ ಹೈನುಗಾರಿಕಾ ಘಟಕವಾಗಿ ಬೆಳೆದು ನಿಂತಿದೆ. ಹಸುಗಳು ಇಂಪಾದ ಸಂಗೀತವನ್ನು ಆಲಿಸಲಿ ಎಂದು ಕೊಟ್ಟಿಗೆಯ ಒಳಗಡೆ ಅಲ್ಲಲ್ಲಿ ಎಫ್.ಎಂ ರೇಡಿಯೊ ವ್ಯವಸ್ಥೆ ಮಾಡಲಾಗಿದೆ. ಹಸುಗಳ ಮೈ ತೊಳೆದ ನೀರು ಮತ್ತು ಗೋಮೂತ್ರಗಳು ಹೊರಗಡೆ ದೊಡ್ಡ ತೊಟ್ಟಿಯಲ್ಲಿ ಸಂಗ್ರಹವಾಗುವಂತೆ ವ್ಯವಸ್ಥೆ ಮಾಡಲಾಗಿದೆ, ತೊಟ್ಟಿಯಿಂದ ನೀರು ನೇರವಾಗಿ ಜಮೀನಿಗೆ ಹೋಗುವಂತೆ ಪಂಪ್ ಸೆಟ್ ಇದೆ. ವಾರ್ಷಿಕವಾಗಿ ಸುಮಾರು 65 ರಿಂದ 70 ಟ್ರಾಕ್ಟರ್ ಸಗಣಿಯ ಲಭ್ಯವಾಗುತ್ತಿದ್ದು ಈ ಸೆಗಣಿಯ ಮಾರಾಟದಿಂದ ಉತ್ತಮ ಆದಾಯವನ್ನು ಗಳಿಸುತ್ತಿದ್ದಾರೆ.

ತಮ್ಮ ಡೈರಿಗೆ ಯಾರೇ ಬಂದು ಮಾಹಿತಿಯನ್ನು ಅಪೇಕ್ಷಿಸಿದರೂ ಅವರಿಗೆ ಯಾವ ಪ್ರತಿಫಲಾಪೇಕ್ಷೆಯಿಲ್ಲದೆ ಮುಕ್ತವಾಗಿ ತಾನು ಅಳವಡಿಸಿಕೊಂಡ ವಿಧಾನಗಳು ಹಾಗೂ ಇಲ್ಲಿನ ಪದ್ಧತಿಗಳ ವಿಚಾರಗಳನ್ನು ಸಂಪೂರ್ಣವಾಗಿ ಧಾರೆಯೆರೆದು, ಯುವಕರಿಗೆ ಆತ್ಮಸ್ಥೈರ್ಯ ತುಂಬುವ ಸಮಾಜಮುಖಿ ಕೆಲಸವನ್ನೂ ಪ್ರಕಾಶ್ ಮಾಡುತ್ತಿದ್ದಾರೆ. ಇವರ ಹೈನುಗಾರಿಕಾ ಘಟಕಕ್ಕೆ ಕೇರಳ, ಆಂಧ್ರ, ತೆಲಂಗಾಣ, ಕರ್ನಾಟಕ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನ, ಜಮ್ಮು ಕಾಶ್ಮೀರ, ನಾಗಾಲ್ಯಾಂಡ್, ಅಸ್ಸಾಂ, ಉತ್ತರಾಖಂಡ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಹರಿಯಾಣ, ಛತ್ತೀಸಗಡ, ಗೋವಾ ಮುಂತಾದ ರಾಜ್ಯಗಳ ನಬಾರ್ಡ್ ಅಧಿಕಾರಿಗಳು ಭೇಟಿ ನೀಡಿದ್ದು, ಇಲ್ಲಿನ ಮಾದರಿಯನ್ನು ವೀಕ್ಷಿಸಿ ಸರಕಾರಕ್ಕೆ ವರದಿ ನೀಡಿದ್ದಾರೆ.

ಪ್ರಧಾನಿಯವರ 'ರೈತರೊಂದಿಗಿನ ಸ್ಯಾಟಲೈಟ್ ನೇರ ಸಂವಾದ' ಕಾರ್ಯಕ್ರಮಕ್ಕೂ ಪ್ರಕಾಶ್ ಆಯ್ಕೆಯಾಗಿದ್ದಾರೆ. ಜೊತೆಗೆ ಪ್ರಕಾಶ್, ಸುಮಾರು 4,000 ಯುವ ರೈತರಿಗೆ ಈ ವಿನೂತನ ಮಾದರಿ ಹೈನುಗಾರಿಕೆ ಪದ್ಧತಿಯ ಕುರಿತು ಸಮಗ್ರ ಮಾಹಿತಿ ನೀಡಿ ಈ ವಿಧಾನವನ್ನು ಅವರೂ ಹೈನುಗಾರಿಕೆಯಲ್ಲಿ ಅಳವಡಿಸಿಕೊಳ್ಳುವಂತೆ ಮಾಡಿದ್ದಾರೆ.

(ಪ್ರಕಾಶ್ ವಿಜಾಪೂರ ದೂರವಾಣಿ ಸಂಖ್ಯೆ: 95381 46978)